**4**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಂ.132. ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು – 560 027

---

## ಪೀಠಿಕೆ

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಯಡಿ ನೋಂದಾಯಿತವಾದ ಕೆಲವು ಸಹಕಾರಿಗಳ ಅಧಿಕೃತ ಕಟ್ಟಡದಲ್ಲಿ ಅದೇ ಹೆಸರಿನ ಅಥವಾ ಬೇರೆ ಹೆಸರಿನ ವಿವಿಧ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದೆ. ಇದು ಸಹಕಾರಿಯು ನಡೆಸುತ್ತಿರುವ ಚಟುವಟಿಕೆಗಳ ಮೇಲೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದೆಂದು ಸಂಯುಕ್ತ ಸಹಕಾರಿಯು ಅಭಿಪ್ರಾಯ ಪಟ್ಟಿದೆ. ಈ ಹಿನ್ನೆಲೆಯಲ್ಲಿ ಈ ಕೆಳಗಿನ ಸುತ್ತೋಲೆಯನ್ನು ನೀಡಲಾಗುತ್ತಿದೆ.

## ಸುತ್ತೋಲೆ

### ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 53 ( 7) (ಎ) ಅಡಿ

**ಸಂಖ್ಯೆ : ಸುತ್ತೋಲೆ 4/2005–06** **25 ಜುಲೈ 2005**

ಯಾವುದೇ ಸೌಹಾರ್ದ ಸಹಕಾರಿಯ ಅಧಿಕೃತ ಕಛೇರಿಯಲ್ಲಿ ಬೇರೆ ಚಟುವಟಿಕೆ ನಡೆಸುತ್ತಿರುವ ಯಾವುದೇ ಸಂಸ್ಥೆಗಳಿದ್ದಲ್ಲಿ ಅವುಗಳನ್ನು ಈ ಕೂಡಲೇ ಸ್ಥಳಾಂತರಿಸಬೇಕೆಂದು ಈ ಮೂಲಕ ನಿರ್ದೇಶನ ನೀಡಲಾಗುತ್ತಿದೆ. ಇದಕ್ಕೆ ತಪ್ಪಿದ ಸಹಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಅಲ್ಲದೇ ಈ ಸುತ್ತೋಲೆ ಸ್ವೀಕರಿಸಿದ ಎಲ್ಲಾ ಸಹಕಾರಿಗಳೂ ಇದರೊಂದಿಗೆ ಲಗತ್ತಿಸಿದ ಮಾದರಿಯಲ್ಲಿ ದೃಢೀಕರಣ ಪತ್ರವನ್ನು ಸಹಕಾರಿಯ ಲೆಟರ್ ಹೆಡ್‌ನಲ್ಲಿ ಅಥವಾ ಅಧಿಕೃತ ಮುದ್ರೆಯೊಂದಿಗೆ ಭರ್ತಿ ಮಾಡಿ ಆಗಸ್ಟ್ 15, 2005ರೊಳಗೆ ಸಂಯುಕ್ತ ಸಹಕಾರಿಯ ಕಛೇರಿಯನ್ನು ತಲುಪುವಂತೆ ಕಳುಹಿಸತಕ್ಕದ್ದು. ಈ ಸುತ್ತೋಲೆಯನ್ನು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಅಂದರೆ 25 ಜುಲೈ 2005ರಂದು ಹೊರಡಿಸಲಾಗಿದೆ.

ಸಹಿ /–
**(ಅನೂಪ ದೇಶಪಾಂಡೆ)**
ವ್ಯವಸ್ಥಾಪಕ ನಿರ್ದೇಶಕ

## (ಸಹಕಾರಿಯ ಮುದ್ರೆ ಅಥವಾ ಲೆಟರ್ ಹೆಡ್)

# ಧೃಢೀಕರಣ ಪತ್ರ

ದಿನಾಂಕ:..............................

..........................................ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ನಾನು ಈ ಮೂಲಕ ಧೃಡೀಕರಿಸುವುದೇನೆಂದರೆ, ನಮ್ಮ ಸಹಕಾರಿಯ ಕಛೇರಿಯಲ್ಲಿ ಸಹಕಾರಿಯ ಚಟುವಟಿಕೆಗಳಹೊರತು ಬೇರಾವ ಸಂಸ್ಥೆಯ ಅಥವಾ ಯಾವುದೇ ವ್ಯಕ್ತಿಯ ಇತರೆ ಚಟುವಟಿಕೆಗಳು ನಡೆಯುತ್ತಿಲ್ಲವೆಂದು ಹಾಗೂ ಈ ಕಚೇರಿಯಲ್ಲಿ ....................................................................... ಸಹಕಾರಿಯ ಅಡಿಯಲ್ಲಿನ ಚಟುವಟಿಕೆಗಳು ಮಾತ್ರ ನಡೆಯುತ್ತಿವೆ ಎಂದು ಈ ಮೂಲಕ ಧೃಡೀಕರಿಸುತ್ತಿದ್ದೇನೆ.

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

***ಗಮನಿಸಿ :*** *ಈ ಸುತ್ತೋಲೆ ಹೊರಡಿಸಿದ ದಿನಾಂಕದ ನಂತರ ನೋಂದಣಿಯಾದ ಸಹಕಾರಿಗಳು ನೋಂದಣಿಯಾದ 30 ದಿನದಲ್ಲಿ ನಿಗದಿಪಡಿಸಿದ ಮಾದರಿಯಲ್ಲಿ ಧೃಢೀಕರಣ ಕಳುಹಿಸತಕ್ಕದ್ದು.*